# NOVEMBER 13, 2025

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಕಬ್ಬು ಬೆಳೆಗಾರರ ವಿಷಯದಲ್ಲಿ, ಕೇಂದ್ರದ ಸುಧಾರಣಾ ಕ್ರಮಗಳನ್ನು ಮರೆಮಾಚಿ, ಕೇಂದ್ರ ಸರ್ಕಾರದ ಮೇಲೆ, ಆರೋಪ ಹೊರಿಸುತ್ತಿರುವ, ರಾಜ್ಯ ಸರ್ಕಾರದ ನಡೆ ಸರಿಯಲ್ಲ ಎಂದು, ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವ, ಪ್ರಲ್ಹಾದ ಜೋಶಿ, ಆಕ್ಷೇಪಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ, ಪತ್ರ ಬರೆದಿರುವ, ಕೇಂದ್ರ ಸಚಿವ ಜೋಶಿ ಅವರು, ಕೇಂದ್ರ ಸರ್ಕಾರ, ಬೆಲೆ ಸ್ಥಿರತೆ ಮತ್ತು ಮಾರುಕಟ್ಟೆ ವ್ಯವಸ್ಥೆಯನ್ನು ಉತ್ತಮೀಕರಿಸಿದೆ. ಆದರೆ, ಪಾವತಿ ಜಾರಿ, ನೀರಾವರಿ ಮತ್ತು ಸಬ್ಸಿಡಿ ವಿತರಣೆ, ರಾಜ್ಯ ಸರ್ಕಾರದ ಹೊಣೆ ಎಂದು, ಸ್ಪಷ್ಟ ಪಡಿಸಿದ್ದಾರೆ.

<><><>

ಹಾವೇರಿ ಮತ್ತು ಬಾಗಲಕೋಟೆ ಜಿಲ್ಲೆ, ಮುಧೋಳದಲ್ಲಿ ಕಬ್ಬು ಬೆಳೆಗಾರರ ಪ್ರತಿಭಟನೆ ಮುಂದುವರೆದಿದೆ. ಪ್ರತಿ ಟನ್ ಕಬ್ಬಿಗೆ, 3 ಸಾವಿರದ 500 ರೂಪಾಯಿ, ನೀಡುವಂತೆ ಅವರು ಒತ್ತಾಯಿಸಿ, ನಿನ್ನೆ ಮುಧೋಳ ಪಟ್ಟಣವನ್ನು ಸಂಪೂರ್ಣ ಬಂದ್ ಮಾಡಿ, ಪ್ರತಿಭಟಿಸಿದರು.

<><><>

ಹಾವೇರಿ ಜಿಲ್ಲಾಧಿಕಾರಿ, ವಿಜಯ ಮಹಾಂತೇಶ ದಾನಮ್ಮನವರ ನೇತೃತ್ವದಲ್ಲಿ, ಜಿಲ್ಲೆಯ ಕಾರ್ಖಾನೆಗಳ ಮಾಲೀಕರು ಹಾಗೂ ಕಬ್ಬು ಬೆಳೆಗಾರರ ಸಭೆ ನಡೆಯಿತು. ಆದರೆ ಸಂಧಾನ ಯಶಸ್ವಿಯಾಗಿಲ್ಲ ಎಂದು, ರೈತ ಮುಖಂಡರು, ತಿಳಿಸಿದ್ದಾರೆ.

<><><>

ಬಾಗಲಕೋಟೆ ಜಿಲ್ಲಾಧಿಕಾರಿ ಸಂಗಪ್ಪ, ರೈತ ಮುಖಂಡರ ಜೊತೆ ಮಾತುಕತೆ ನಡೆಸಿದರೂ, ರೈತರು ತಮ್ಮ ಪಟ್ಟು ಸಡಿಲಿಸದೇ, ಮುಧೋಳ ತಾಲೂಕಿನ ವಿವಿಧೆಡೆ ನಿನ್ನೆ ರಸ್ತೆ ತಡೆ ನಡೆಸಿದರು.

<><><>

ಬೀದರ ಜಿಲ್ಲೆ, ಹುಮನಾಬಾದನಲ್ಲಿ, ಮುಂಬೈ–ಹೈದರಾಬಾದ್ ಹೆದ್ದಾರಿ ತಡೆದ ಕಬ್ಬು ಬೆಳೆಗಾರರು, ಕಬ್ಬಿಗೆ ಯೋಗ್ಯ ಬೆಲೆ ನಿಗದಿ ಪಡಿಸುವಂತೆ ಆಗ್ರಹಿಸಿದರು. ಜಿಲ್ಲಾಧಿಕಾರಿ ನೇತೃತ್ವದಲ್ಲಿ ನಾಲ್ಕು ಸಭೆಗಳು ನಡೆದಿವೆ. ಇಂದು, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಕಬ್ಬು ಬೆಳೆಗಾರರು ಹಾಗೂ ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗೆ ಮತ್ತೊಂದು ಸುತ್ತಿನ ಸಭೆ ಏರ್ಪಡಿಸಿದ್ದಾರೆ.

<><><>

ಧಾರವಾಡ ಜಿಲ್ಲೆ, ಕುಂದಗೋಳ ತಾಲೂಕು, ರೈತ ಉತ್ಪಾದಕರ ಕಂಪೆನಿ ನಿಯಮಿತ ವತಿಯಿಂದ, ಸಂಶಿಯ, ಕೃಷಿ ಉತ್ಪನ್ನಗಳ ಮಾರಾಟ ಮಂಡಳಿ – ಎ.ಪಿ.ಎಂ.ಸಿ. ಆವರಣದಲ್ಲಿ, ಸೋಯಾಬೀನ್ ಖರೀದಿ ಕೇಂದ್ರ ಮಂಜೂರಾಗಿದ್ದು, ಕುಂದಗೋಳ

ಶಾಸಕ ಎಂ.ಆರ್. ಪಾಟೀಲ ಉದ್ಘಾಟಿಸಿದರು. ಕೇಂದ್ರ ಪುರಸ್ಕೃತ, ಸೆಂಟ್ರಲ್ ಸೆಕ್ಟರ್ ಸ್ಕೀಮ್ ಯೋಜನೆ ಅಡಿ, ಸ್ಥಾಪಿತವಾದ, ಕುಂದಗೋಳ ಫಾರ್ಮರ್ಸ್ ಪ್ರೊಡ್ಯುಸರ್ಸ್ ಕಂಪನಿ ಲಿಮಿಟೆಡ್, ರೈತರಿಗೆ ಕಡಿಮೆ ಬೆಲೆಯಲ್ಲಿ ಕೃಷಿ ಪರಿಕರ ಹಾಗೂ ರೈತರಿಗೆ ಬಿತ್ತನೆ ಬೀಜಗಳ ಮೂಲಕ, ಅನುಕೂಲ ಕಲ್ಪಿಸುತ್ತಿರುವುದಕ್ಕೆ, ಶಾಸಕರು ಮೆಚ್ಚುಗೆ ವ್ಯಕ್ತ ಪಡಿಸಿದರು.

<><><>

ಅಂತಾರಾಷ್ಟ್ರೀಯ ದತ್ತು ಮಾಸಾಚರಣೆ ಹಿನ್ನಲೆ, ಯಾದಗಿರಿ ಜಿಲ್ಲಾಡಳಿತ, 18 ವರ್ಷದ ವರೆಗಿನ, ಸಾಮಾನ್ಯ ಹಾಗೂ ವಿಶೇಷ ಮಕ್ಕಳ ದತ್ತು ಪಡೆಯುವಿಕೆ, ರಕ್ಷಣೆ ಹಾಗೂ ಪೋಷಣೆ ಬಗ್ಗೆ, ಜನ ಜಾಗೃತಿ ಮೂಡಿಸುತ್ತಿದೆ. ಜಿಲ್ಲಾಧಿಕಾರಿ ಹರ್ಷಲ್ ಭೋಯರ್, ಈ ಕುರಿತು ಮಾಹಿತಿ ನೀಡಿದ್ದಾರೆ.

<><><>

ಹರ್ಷಲ್ ಭೋಯರ್ ಧ್ವನಿ 37 ಸೆಕೆಂದುಗಳು

<><><>

ಮಹಿಳಾ ಉದ್ಯೋಗಿಗಳಿಗೆ, ಮಾಸಿಕ ಒಂದು ದಿನದ ವೇತನಸಹಿತ ಋತುಚಕ್ರ ರಜೆ ನೀಡುವ ನೀತಿಯನ್ನು, ರಾಜ್ಯ ಸರ್ಕಾರ ಅಧಿಕೃತವಾಗಿ ಜಾರಿ ಗೊಳಿಸಿದೆ.  ಸರ್ಕಾರಿ, ಖಾಸಗಿ ಎಂಬ ವ್ಯತ್ಯಾಸವಿಲ್ಲದೇ, 18 ರಿಂದ 52 ವರ್ಷ ವಯೋಮಿತಿಯ, ಎಲ್ಲ ಖಾಯಂ, ಗುತ್ತಿಗೆ, ಹೊರ ಗುತ್ತಿಗೆ ಮಹಿಳಾ ನೌಕರರು, ಪ್ರತಿ ಮಾಸಿಕ ಒಂದು ದಿನದಂತೆ, 12 ದಿನಗಳ ವೇತನ ಸಹಿತ ರಜೆಯ ಸೌಲಭ್ಯವನ್ನು, ಉದ್ಯೋಗದಾತರು ಒದಗಿಸಬೇಕು ಎಂದು, ಕಾರ್ಮಿಕ ಇಲಾಖೆ ಆದೇಶಿಸಿದೆ. ಸರ್ಕಾರದ ಎಲ್ಲ ಇಲಾಖೆಗಳು, ನಿಗಮ–ಮಂಡಳಿ, ಬಹುರಾಷ್ಟ್ರೀಯ ಕಂಪನಿಗಳು, ಐಟಿ–ಬಿಟಿ, ಸಿದ್ಧ ಉಡುಪು ಕೈಗಾರಿಕೆ ಸೇರಿದಂತೆ, ಖಾಸಗಿ ವಲಯದ ಎಲ್ಲ ಸಂಸ್ಥೆಗಳು, ಋತುಚಕ್ರ ರಜೆ ಅನುಷ್ಠಾನ ಕೈಗೊಳ್ಳಲು, ಸೂಚಿಸಲಾಗಿದೆ.

<><><>

ಪ್ರಯಾಣಿಕರ ದಟ್ಟಣೆ ನಿಯಂತ್ರಿಸಲು, ನೈಋತ್ಯ ರೇಲ್ವೆ, ಇಂದಿನಿಂದ ಹುಬ್ಬಳ್ಳಿ–ಯಲಹಂಕ ಮಧ್ಯೆ, ಒನ್ ವೇ ವಿಶೇಷ ರೈಲು ಸಂಚಾರ ಆರಂಭಿಸಿದೆ. ಇಂದು ರಾತ್ರಿ 8 ಗಂಟೆಗೆ, ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮೀಜಿ ರೈಲು ನಿಲ್ದಾಣದಿಂದ ಹೊರಡುವ ವಿಶೇಷ ರೈಲು, ನಾಳೆ ಬೆಳಗ್ಗೆ 9.20ಕ್ಕೆ ಯಲಹಂಕ ನಿಲ್ದಾಣ ತಲುಪಲಿದೆ. ಗದಗ, ಕೊಪ್ಪಳ, ಬಳ್ಳಾರಿ, ಅನಂತಪುರ, ಧರ್ಮಾವರಂ, ಶ್ರೀ ಸತ್ಯಸಾಯಿ ಪ್ರಶಾಂತಿ ನಿಲಯಂ, ಹಿಂದುಪುರ ಹಾಗೂ ಗೌರಿಬಿದನೂರು ನಿಲ್ದಾಣಗಳ ಮೂಲಕ, ಸಂಚರಿಸಲಿದೆ.

<><><>

ಅನುವಾದಕರಿಗೆ, ಓದುವ ಹವ್ಯಾಸವಿರಬೇಕು; ಗಣನೀಯ ಸಂಖ್ಯೆಯ ಯುವಜನತೆ ಅನುವಾದಿಸುತ್ತಿದ್ದು, ಅನುವಾದ ಕೃಷಿಯ ಭವಿಷ್ಯ ಉಜ್ವಲವಾಗಿದೆ ಎಂದು, ಬುಕರ್ ಪ್ರಶಸ್ತಿ ಪುರಸ್ಕೃತ ಅನುವಾದಕಿ ದೀಪಾ ಭಾಸ್ತಿ ಹೇಳಿದ್ದಾರೆ. ಧಾರವಾಡದ, ಕರ್ನಾಟಕ ವಿದ್ಯಾವರ್ಧಕ ಸಂಘ, 70ನೇ ರಾಜ್ಯೋತ್ಸವದ ಅಂಗವಾಗಿ, ನಾಡಹಬ್ಬದಡಿ, ಧರೆಗೆ ದೊಡ್ಡವರು ವಿಶೇಷ ಕಾರ್ಯಕ್ರಮದಡಿ, ಸನ್ಮಾನ ಸ್ವೀಕರಿಸಿ, ಮಾತನಾಡಿದರು. ಕನ್ನಡ ಭಾಷೆ ಸತ್ವಯುತವಾದ ಭಾಷೆ. ತನ್ನದೇ ಆದ ಪರಂಪರೆ ಇದೆ. ಹೊಸ ತಂತ್ರಜ್ಞಾನಕ್ಕೆ ಅಡಕ ಮತ್ತು ಅನ್ವಯಗೊಂಡ ಬಳಿಕ, ಭಾಷೆ ಸಮೃದ್ಧವಾಗಿ ಬೆಳೆಯುತ್ತಿದೆ, ಎಂದರು.

<><><>

ಬೆಳಗಾವಿಯ, ಕೆ.ಎಲ್.ಇ. – ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಯ, 110ನೇ ಸಂಸ್ಥಾಪನಾ ದಿನಾಚರಣೆ ಇಂದು. ಬೆಳಗಾವಿಯ, ಜವಹರಲಾಲ ನೆಹರು ವೈದ್ಯಕೀಯ ಮಹಾವಿದ್ಯಾಲಯದ, ಆವರಣದಲ್ಲಿರುವ, ಕೆ.ಎಲ್.ಇ. ಶತಮಾನೋತ್ಸವ ಸ್ಮಾರಕ ಭವನದಲ್ಲಿ, ವಿಶೇಷ ಕಾರ್ಯಕ್ರಮ, ಇಂದು ಪೂರ್ವಾಹ್ನ ಗಣ್ಯರ ಉಪಸ್ಥಿತಿಯಲ್ಲಿ ಜರುಗಲಿದೆ. ಡಾಕ್ಟರ್ ಪ್ರಭಾಕರ ಕೋರೆ ಅವರು, 1984 ರಿಂದ 42 ವರ್ಷಗಳ ಕಾಲ, ಸಂಸ್ಥೆಯ ಅಧ್ಯಕ್ಷರಾಗಿ, ಮುನ್ನಡೆಸುತ್ತಿದ್ದಾರೆ.

<><><>

ಇನ್ಫೋಸಿಸ್ ವಿಜ್ಞಾನ ಪ್ರತಿಷ್ಠಾನ, 2025ನೇ ಸಾಲಿನ ಪ್ರಶಸ್ತಿಗಳನ್ನು ಪ್ರಕಟಿಸಿದೆ. ವಿಜ್ಞಾನ ವಿಷಯಗಳ ಬೋಧನೆ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವ, ಅಮೆರಿಕದ ವಿವಿಧ ಶೈಕ್ಷಣಿಕ ಸಂಸ್ಥೆಗಳ ನಾಲ್ವರು ಹಾಗೂ ಭಾರತದ ಶೈಕ್ಷಣಿಕ

ಸಂಸ್ಥೆಗಳ ಇಬ್ಬರು ವಿಜ್ಞಾನಿಗಳು, ಆಯ್ಕೆಯಾಗಿದ್ದಾರೆ.  ಚಿನ್ನದ ಪದಕ, ಪ್ರಶಸ್ತಿ ಫಲಕ ಹಾಗೂ 1 ಲಕ್ಷ ಅಮೆರಿಕನ್ ಡಾಲರ್, ಅಂದಾಜು 88 ಲಕ್ಷ ರೂಪಾಯಿ ತಲಾ ನಗದು ಪುರಸ್ಕಾರ ಪಡೆಯಲಿದ್ದಾರೆ. ಇನ್ಫೋಸಿಸ್ ವಿಜ್ಞಾನ ಪ್ರತಿಷ್ಠಾನದ, ವಿಶ್ವಸ್ಥರಾದ ನಾರಾಯಣಮೂರ್ತಿ, ಕ್ರಿಸ್ ಗೋಪಾಲಕೃಷ್ಣನ್, ಶ್ರೀನಾಥ ಬಾಟ್ನಿ, ಪ್ರತಿಮಾ ಮೂರ್ತಿ, ನಂದನ ನಿಲೇಕಣಿ ಭಾಗಿಯಾಗಿದ್ದ ಸುದ್ದಿಗೋಷ್ಠಿಯಲ್ಲಿ, ಪ್ರತಿಷ್ಠಾನದ ಅಧ್ಯಕ್ಷ ಕೆ. ದಿನೇಶ ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು, ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.